ವರ್ತಮಾನ ಸಮಯ ಪ್ರಮಾಣ ವೈರಾಗ್ಯವೃತ್ತಿಯನ್ನು ಇಮರ್ಜ್ ಮಾಡಿಕೊಂಡು ಸಾಧನೆಯ ವಾಯುಮಂಡಲವನ್ನು ಮಾಡಿ

ಇಂದು ಸ್ನೇಹದ ಸಾಗರ ಬಾಪ್ದಾದಾರವರು ತನ್ನ ಅತಿ ಸ್ನೇಹಿ ಮಕ್ಕಳೊಂದಿಗೆ ಮಿಲನ ಮಾಡುತ್ತಿದ್ದಾರೆ. ಇಂದಿನ ದಿನ ವಿಶೇಷ ಸ್ನೇಹದ ದಿನವಾಗಿದೆ. ಅಮೃತವೇಳೆಯಿಂದ ಹಿಡಿದು ನಾಲ್ಕಾರು ಕಡೆ ಮಕ್ಕಳು ಸ್ನೇಹದ ಅಲೆಯಲ್ಲಿ ತೇಲಾಡುತ್ತಿದ್ದಾರೆ. ಪ್ರತಿಯೊಂದು ಮಗುವಿನ ಹೃದಯದ ಸ್ನೇಹ ಹೃದಯ ರಾಮ ತಂದೆಯ ಬಳಿ ತಲುಪಿದೆ. ಬಾಪ್ದಾದಾರವರು ಸಹ ಎಲ್ಲಾ ಮಕ್ಕಳ ಸ್ನೇಹದ ಪ್ರತಿಕ್ರಿಯೆಯಾಗಿ ಸ್ನೇಹ ಹಾಗೂ ಸಮರ್ಥತನದ ವರದಾನವನ್ನು ಕೊಡುತ್ತಿದ್ದಾರೆ. ಇಂದಿನ ದಿನವನ್ನು ಬಾಪ್ದಾದಾರವರು ಯಜ್ಞದ ಸ್ಥಾಪನೆಯಲ್ಲಿ ವಿಶೇಷ ಪರಿವರ್ತನೆಯ ದಿನ ಎಂದು ಹೇಳುತ್ತಾರೆ. ಇಂದಿನ ದಿನ ಬ್ರಹ್ಮಾ ತಂದೆ ಗುಪ್ತ ರೂಪದಲ್ಲಿ ಬ್ಯಾಕ್ ಬೋನ್(ಬೆನ್ನೆಲುಬು) ಆಗಿ ತನ್ನ ಮಕ್ಕಳನ್ನು ಸಾಕಾರ ರೂಪದಲ್ಲಿ ವಿಶ್ವದ ವೇದಿಕೆಯ ಮೇಲೆ ಪ್ರತ್ಯಕ್ಷ ಮಾಡಿದರು, ಆದ್ದರಿಂದ ಈ ದಿನವನ್ನು ಮಕ್ಕಳ ಪ್ರತ್ಯಕ್ಷತೆಯ ದಿನ ಎಂದು ಹೇಳಲಾಗುತ್ತದೆ. ಸಮರ್ಥ ದಿವಸ ಎಂದು ಹೇಳಲಾಗುತ್ತದೆ. ವಿಲ್ ಪವರ್(ದೃಢತೆಯ ಶಕ್ತಿ) ಕೊಡುವ ದಿವಸ ಎಂದು ಹೇಳಲಾಗುತ್ತದೆ. ಬ್ರಹ್ಮಾ ತಂದೆ ಗುಪ್ತ ರೂಪದಲ್ಲಿ ಕಾರ್ಯ ಮಾಡುತ್ತಿದ್ದಾರೆ. ಬೇರೆಯಾಗಿಲ್ಲ, ಜೊತೆಯಲ್ಲಿಯೇ ಇದ್ದಾರೆ ಕೇವಲ ಗುಪ್ತ ರೂಪದಲ್ಲಿ ಮಾಡಿಸುತ್ತಿದ್ದಾರೆ. ಈ ಅವ್ಯಕ್ತ ದಿವಸ ಮಕ್ಕಳ ಕಾರ್ಯವನ್ನು ತೀವ್ರ ಗತಿಯಲ್ಲಿ ತರುವಂತಹ ದಿನವಾಗಿದೆ. ಈಗಲೂ ಸಹ ಪ್ರತಿಯೊಂದು ಮಗುವಿನ ಛತ್ರಛಾಯೆಯಾಗಿ ಪಾಲನೆಯ ಕರ್ತವ್ಯ ಮಾಡುತ್ತಿದ್ದಾರೆ. ಹೇಗೆ ತಾಯಿ ಮಕ್ಕಳಿಗೆ ಛತ್ರ ಛಾಯೆಯಾಗಿರುತ್ತಾಳೆ , ಅದೇ ರೀತಿ ಅಮೃತ ವೇಳೆಯಿಂದ ಹಿಡಿದು ಬ್ರಹ್ಮಾ ತಾಯಿಯು ನಾಲ್ಕಾರು ಕಡೆಯ ಮಕ್ಕಳ ಲಾಲನೆ-ಪಾಲನೆ ಮಾಡುತ್ತಾ ಇರುತ್ತಾರೆ. ಸಾಕಾರದಲ್ಲಿ ನಿಮಿತ್ತ ಮಕ್ಕಳಾಗಿದ್ದಾರೆ ಆದರೆ ಭಾಗ್ಯ ವಿಧಾತ ಬ್ರಹ್ಮಾ ತಾಯಿ ಪ್ರತಿಯೊಂದು ಮಗುವಿನ ಭಾಗ್ಯವನ್ನು ನೋಡಿ ಮಕ್ಕಳ ವಿಶೇಷ ಶಕ್ತಿ, ಸಾಹಸ, ಉಮಂಗ ಉತ್ಸಾಹದ ಪಾಲನೆ ಮಾಡುತ್ತಾರೆ. ಶಿವ ಬಾಬಾರವರಂತೂ ಜೊತೆಯಲ್ಲಿಯೇ ಇದ್ದಾರೆ ಆದರೆ ವಿಶೇಷ ಬ್ರಹ್ಮಾನ ಪಾಲನೆಯ ಪಾತ್ರವಿದೆ.

ಇಂದಿನ ದಿನ ಭಾಗ್ಯವಿಧಾತ ಬ್ರಹ್ಮಾ ಪ್ರತಿಯೊಂದು ಮಗುವಿಗೂ ವಿಶೇಷ ಸ್ನೇಹದ ರಿಟರ್ನ್(ಬದಲಾಗಿ) ವರದಾನಗಳ ಭಂಡಾರವನ್ನು ಬಂಡಾರಿಯಾಗಿ ಹಂಚುತ್ತಾರೆ. ಯಾವ ಮಕ್ಕಳು ಎಷ್ಟು ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಿದ್ದು ಮಿಲನ ಮಾಡುತ್ತಾರೆ ಆ ಪ್ರತಿಯೊಂದು ಮಗುವಿಗೂ ಯಾವ ವರದಾನ ಬೇಕು , ಅದು ಸಹಜವಾಗಿ ಪ್ರಾಪ್ತಿ ಆಗುತ್ತದೆ. ವರದಾನದ ತೆರೆದ ಭಂಡಾರವಾಗಿದೆ, ಯಾರು ಬೇಕಾದರೂ, ಎಷ್ಟು ಬೇಕಾದರೂ ಅಷ್ಟು ಪ್ರಾಪ್ತಿ ಮಾಡಿಕೊಳ್ಳುವ ಶ್ರೇಷ್ಠ ದಿನವಾಗಿದೆ. ಸಹಜ ವರದಾನಗಳ ಉಡುಗೊರೆ- ಸ್ನೇಹದ ರಿಟರ್ನ್ ಆಗಿರುತ್ತದೆ. ಹಾಗಾದರೆ ಉಡುಗೊರೆಯಲ್ಲಿ ಪರಿಶ್ರಮ ಪಡುವ ಅವಶ್ಯಕತೆ ಇರುವುದಿಲ್ಲ, ಸಹಜವಾಗಿ ಪ್ರಾಪ್ತಿಯಾಗುತ್ತದೆ. ಉಡುಗೊರೆಯನ್ನು ಬೇಡಲಾಗುವುದಿಲ್ಲ, ಸ್ವತಹವಾಗಿ ಪ್ರಾಪ್ತಿಯಾಗುತ್ತದೆ ಪುರುಷಾರ್ಥದಿಂದ ವರದಾನದ ಅನುಭೂತಿ ಪ್ರಾಪ್ತಿಯಾಗುವುದು ಬೇರೆ ಮಾತಾಗಿದೆ ಆದರೆ ಇಂದಿನ ದಿನ ಬ್ರಹ್ಮಾ ತಾಯಿ ಸ್ನೇಹದ ರಿಟರ್ನ್ ವರದಾನವನ್ನು ಕೊಡುತ್ತಾರೆ. ಇಂದಿನ ದಿನ ಎಲ್ಲರೂ ಸಹಜ ವರದಾನ ಪ್ರಾಪ್ತಿಯಾಗುವ ಅನುಭೂತಿ ಮಾಡಿದರೆ? ಈಗಲೂ ಸಹ ಸತ್ಯ ಹೃದಯದ ಸ್ನೇಹದ ರಿಟರ್ನ್ ವರದಾನದ ಪ್ರಾಪ್ತಿ ಮಾಡಬಹುದು. ವರದಾನವನ್ನು ಪ್ರಾಪ್ತಿ ಮಾಡುವ ಸಾಧನವಾಗಿದೆ- ಹೃದಯದ ಸ್ನೇಹ. ಎಲ್ಲಿ ಹೃದಯದ ಸ್ನೇಹವಿದೆ, ಆ ಸ್ನೇಹ ಇಂತಹ ಖಜಾನೆಯಾಗಿದೆ ? ಯಾವ ಖಜಾನೆಯ ಮೂಲಕ, ಬಾಪ್ದಾದಾರವರ ಮೂಲಕ ಏನು ಬೇಕಾದರೂ ಅವಿನಾಶಿ ವರದಾನವನ್ನು ಪ್ರಾಪ್ತಿ ಮಾಡಿಕೊಳ್ಳಬಹುದು. ಈ ಸ್ನೇಹದ ಖಜಾನೆ ಪ್ರತಿಯೊಂದು ಮಗುವಿನ ಬಳಿ ಇದೆಯೇ? ಸ್ನೇಹದ ಖಜಾನೆ ಇರುವ ಕಾರಣವೇ ತಲುಪಿದ್ದೀರಲ್ಲವೇ! ಸ್ನೇಹ ಸೆಳೆದುಕೊಂಡು ತಂದಿದೆ ಹಾಗೂ ಸ್ನೇಹದಲ್ಲಿ ಇರುವುದು ಬಹಳ ಸಹಜವಾಗಿದೆ . ಪುರುಷಾರ್ಥದ ಪರಿಶ್ರಮ ಮಾಡಬೇಕಾಗಿಲ್ಲ ಏಕೆಂದರೆ ಸ್ನೇಹದ ಅನುಭವ ಪ್ರತಿಯೊಂದು ಆತ್ಮನಿಗೂ ಆಗಿರುತ್ತದೆ. ಕೇವಲ ಈಗ ಹರಡಿಕೊಂಡಿರುವ ಯಾವ ಸ್ನೇಹವಿತ್ತು, ಸ್ವಲ್ಪ ಅಲ್ಲಿ, ಸ್ವಲ್ಪ ಇಲ್ಲಿ, ಆ ಹರಡಿಕೊಂಡಿರುವ ಸ್ನೇಹವನ್ನು ಒಬ್ಬರೊಂದಿಗೆ ಜೋಡಿಸಿದ್ದೀರಿ ಏಕೆಂದರೆ ಮೊದಲು ಬೇರೆ ಬೇರೆ ಸಂಬಂಧವಿತ್ತು, ಈಗ ಒಬ್ಬರಲ್ಲಿ ಸರ್ವ ಸಂಬಂಧವು ಇದೆ. ಎಂದ ಮೇಲೆ ಸಹಜವಾಗಿ ಸರ್ವ ಸಂಬಂಧಗಳು ಒಬ್ಬರೊಂದಿಗೆ ಆಯಿತು, ಆದ್ದರಿಂದ ಪ್ರತಿಯೊಬ್ಬರೂ ಹೇಳುತ್ತಾರೆ ನನ್ನ ಬಾಬಾ. ಸ್ನೇಹ ಯಾರೊಂದಿಗೆ ಇರುತ್ತದೆ? ನನ್ನದರೊಂದಿಗೆ. ಎಲ್ಲರೂ ಹೇಳುತ್ತೀರಲ್ಲವೇ ನನ್ನ ಬಾಬಾ, ಅಥವಾ ದಾದಿಯರ ಬಾಬಾ ಆಗಿದ್ದಾರೆಯೇ? ಮಹಾರಥಿಯರ ಬಾಬಾ ಆಗಿದ್ದಾರೆಯೇ? ಎಲ್ಲರ ಬಾಬಾ ಆಗಿದ್ದಾರೆ ಅಲ್ಲವೇ! ಇಂದಿನ ದಿನ ಎಷ್ಟು ಬಾರಿ ಪ್ರತಿಯೊಬ್ಬ ಮಕ್ಕಳು ಹೃದಯದಿಂದ - ನನ್ನ ಬಾಬಾ, ನನ್ನ ಬಾಬಾ ಎಂದು ಹೇಳಿದಿರಿ? ಎಲ್ಲರೂ ನನ್ನ ಬಾಬಾ , ನನ್ನ ಬಾಬಾ ಎಂದು ಹೇಳಿ ಆತ್ಮಿಕ ವಾರ್ತಾಲಾಪ ಮಾಡಿದಿರಿ ಅಲ್ಲವೇ! ಇಡೀ ದಿನ ಏನು ಮಾಡಿದಿರಿ? ಸ್ನೇಹದ ಪುಷ್ಪವನ್ನು ಬಾಪ್ದಾದಾರವರಿಗೆ ಅರ್ಪಣೆ ಮಾಡಿದ್ದೀರಿ. ಬಾಪ್ದಾದಾರವರ ಬಳಿ ಬಹಳ ಒಳ್ಳೊಳ್ಳೆಯ ಸ್ನೇಹದ ಪುಷ್ಪ ತಲುಪುತ್ತಿದ್ದವು. ಸ್ನೇಹವಂತು ಬಹಳ ಚೆನ್ನಾಗಿತ್ತು, ಈಗ ಬಾಬಾರವರು ಹೇಳುತ್ತಾರೆ ಸ್ನೇಹದ ಸ್ವರೂಪವನ್ನು ಸಾಕರದಲ್ಲಿ ಇಮರ್ಜ್ ಮಾಡಿ. ಇದಾಗಿದೆ ಸಮಾನರಾಗುವುದು. ಈಗ ಈ ಸಮಾನ ರಾಗುವ ಲಕ್ಷವಂತು ಎಲ್ಲರ ಬಳಿ ಇದೆ ಈಗ ಸಾಕರದಲ್ಲಿ ಈ ಲಕ್ಷಣಗಳು ಕಂಡು ಬರಲಿ. ಯಾವುದೇ ಮಗುವನ್ನು ನೋಡಿದರೂ, ಯಾರು ಸಿಕ್ಕಿದರೂ, ಸಂಬಂಧ ಸಂಪರ್ಕದಲ್ಲಿ ಬಂದರು,

ಅವರಿಗೆ ಈ ಲಕ್ಷಣಗಳು ಕಾಣಿಸಬೇಕು- ಇದಂತು ಪರಮಾತ್ಮ ತಂದೆಯಂತಹ, ಬ್ರಹ್ಮಾ ತಂದೆಯ ಗುಣವಾಗಿದೆ. ಇದು ಮಕ್ಕಳ ಚಹರೆ ಹಾಗೂ ಚಲನೆಯಿಂದ ಕಾಣಿಸಲಿ. ಇವರ ನಯನಗಳು, ಇವರ ಮಾತು, ಇವರ ವೃತ್ತಿ ಹಾಗೂ ಪ್ರಕಂಪನಗಳು ಭಿನ್ನವಾಗಿವೆ ಎಂದು ಅನುಭವ ಮಾಡಬೇಕು. ಮಧುಬನಕ್ಕೆ ಬರುತ್ತಾರೆ ಎಂದರೆ ಬ್ರಹ್ಮಾ ತಂದೆಯ ಕರ್ಮ ಸಾಕಾರದಲ್ಲಿ ಇರುವ ಕಾರಣ ಭೂಮಿಯಲ್ಲಿ ತಪಸ್ಸು, ಕರ್ಮ ಹಾಗೂ ತ್ಯಾಗದ ಪ್ರಕಂಪನಗಳು ಸಮಾವೇಶವಾಗಿರುವ ಕಾರಣ ಈ ಸಂಸಾರ ಭಿನ್ನವಾಗಿದೆ ಎಂದು ಸಹಜ ಅನುಭವವಾಗುತ್ತದೆ ಏಕೆಂದರೆ ಬ್ರಹ್ಮಾ ತಂದೆ ಹಾಗೂ ವಿಶೇಷ ಮಕ್ಕಳ ಪ್ರಕಂಪನಗಳಿಂದ ಅಲೌಕಿಕವಾದ ವಾಯುಮಂಡಲ ತಯಾರಾಗಿದೆ. ಇದೇ ರೀತಿ ಯಾವ ಮಕ್ಕಳು ಎಲ್ಲಿದ್ದರೂ, ಯಾವುದೇ ಕರ್ಮ ಕ್ಷೇತ್ರದಲ್ಲಿದ್ದರೂ, ಪ್ರತಿಯೊಂದು ಮಗುವಿನಿಂದ ತಂದೆಯ ಸಮಾನ ಗುಣ, ಕರ್ಮ ಹಾಗೂ ಶ್ರೇಷ್ಠವೃತ್ತಿಯ ವಾಯುಮಂಡಲ ಅನುಭವದಲ್ಲಿ ಬರಲಿ, ಇದಕ್ಕೆ ಬಾಪ್ದಾದಾರವರು ಹೇಳುತ್ತಾರೆ- ತಂದೆಯ ಸಮಾನರಾಗುವುದು ಎಂದು. ಇದುವರೆಗೂ ತಂದೆಯ ಸಮಾನರಾಗಲೇಬೇಕು ಎಂಬ ಯಾವ ಸಂಕಲ್ಪವಿದೆ, ಆ ಸಂಕಲ್ಪ ಈಗ ಚಹರೆ ಹಾಗೂ ಚಲನೆಯಿಂದ ಕಾಣಿಸಲಿ. ಯಾರೆಲ್ಲಾ ಸಂಬಂಧ ಸಂಪರ್ಕದಲ್ಲಿ ಬಂದರೂ ಅವರ ಹೃದಯದಿಂದ " ಈ ಆತ್ಮರು ತಂದೆಯ ಸಮಾನರಾಗಿದ್ದಾರೆ" ಎಂಬ ಶಬ್ದ ಹೊರಬರಲಿ.(ಮಧ್ಯ ಮಧ್ಯದಲ್ಲಿ ಕೆಮ್ಮು ಬರುತ್ತಿದೆ) ಇಂದು ಮೈಕ್ ಸರಿ ಇಲ್ಲ, ಮಿಲನವನ್ನಂತೂ ಮಾಡಬೇಕಲ್ಲವೇ. ಇವರು ಸಹ ಮೈಕ್ ಆಗಿದ್ದಾರೆ ಅಲ್ಲವೇ, ಈ ಮೈಕ್ ನಡೆಯದಿದ್ದರೆ ಈ ಮೈಕ್ ಸಹ ಕೆಲಸಕ್ಕೆ ಬರುವುದಿಲ್ಲ. ಯಾವುದೇ ತೊಂದರೆ ಇಲ್ಲ ಇದು ಸಹ ಹವಾಮಾನದ ಫಲವಾಗಿದೆ.

ಹಾಗಾದರೆ ಈಗ ಎಲ್ಲಾ ಮಕ್ಕಳಿಂದ ಈ ಪ್ರತ್ಯಕ್ಷತೆಯನ್ನು ಬಯಸುತ್ತಾರೆ, ಹೇಗೆ ವಾಣಿಯ ಮೂಲಕ ಪ್ರತ್ಯಕ್ಷತೆ ಮಾಡುತ್ತೀರಿ ಎಂದರೆ ವಾಣಿಯ ಪ್ರಭಾವ ಬೀರುತ್ತದೆ, ಅದಕ್ಕಿಂತ ಹೆಚ್ಚು ಪ್ರಭಾವ ಗುಣ ಹಾಗೂ ಕರ್ಮಗಳಿಂದ ಬೀರುತ್ತದೆ. ಪ್ರತಿಯೊಬ್ಬ ಮಗುವಿನ ನಯನಗಳಿಂದ - ಇವರ ನಯನಗಳಲ್ಲಿ ಯಾವುದೋ ವಿಶೇಷತೆ ಇದೆ ಎಂಬ ಅನುಭವವಾಗಲಿ. ಸಾಧಾರಣ ಅನುಭವ ಆಗದಿರಲಿ. ಅಲೋಕಿಕರಾಗಿದ್ದಾರೆ. ಅವರ ಮನಸ್ಸಿನಲ್ಲಿ ಈ ರೀತಿ ಹೇಗಾದರೂ? ಎಲ್ಲಿಂದ ಆದರೂ? ಎಂಬ ಪ್ರಶ್ನೆಗಳು ಬರಲಿ. ಸ್ವಯಂ ಸಹ ಯೋಚಿಸಲಿ ಹಾಗೂ ಮಾಡುವವರು ಯಾರು ಎಂದು ಕೇಳಲಿ? ಹೇಗೆ ಇತ್ತೀಚಿನ ಸಮಯದಲ್ಲಿಯು ಸಹ ಯಾವುದಾದರೂ ಒಳ್ಳೆಯ ವಸ್ತುವನ್ನು ನೋಡಿದರೆ, ಇದನ್ನು ಮಾಡಿದವರು ಯಾರು ಎಂಬ ಪ್ರಶ್ನೆ ಮನಸ್ಸಿನಲ್ಲಿ ಬರುತ್ತದೆ, ಇದೇ ರೀತಿ ತಮ್ಮ ತಂದೆಯ ಸಮಾನರಾಗುವ ಸ್ಥಿತಿಯ ಮೂಲಕ ತಂದೆಯ ಪ್ರತ್ಯಕ್ಷತೆ ಮಾಡಿ. ಇತ್ತೀಚೆಗೆ ಬಹುತೇಕ ಆತ್ಮಗಳು - ಈ ಸಾಕಾರ ಸೃಷ್ಟಿಯಲ್ಲಿ, ಈ ವಾತಾವರಣದಲ್ಲಿ ಇದ್ದರೂ ಸಹ ಈ ರೀತಿ ಯಾವುದೇ ಆತ್ಮ ಆಗಲು ಸಾಧ್ಯವೇ? ಎಂದು ಯೋಚಿಸುತ್ತಾರೆ. ನೀವು ಅವರಿಗೆ ಇದನ್ನು ಪ್ರತ್ಯಕ್ಷದಲ್ಲಿ ತೋರಿಸಿ- ಆಗಲು ಸಾಧ್ಯ ಹಾಗೂ ನಾವು ಆಗಿದ್ದೇವೆ. ಇತ್ತೀಚೆಗೆ ಪ್ರತ್ಯಕ್ಷ ಪ್ರಮಾಣವನ್ನು ಹೆಚ್ಚು ನಂಬುತ್ತಾರೆ. ಕೇಳಿಸಿಕೊಳ್ಳುವುದಕ್ಕಿಂತ ಜಾಸ್ತಿ ನೋಡಲು ಬಯಸುತ್ತಾರೆ ಹಾಗಾದರೆ ನಾಲ್ಕಾರು ಕಡೆ ಎಷ್ಟು ಮಕ್ಕಳಿದ್ದಾರೆ, ಪ್ರತಿಯೊಂದು ಮಗು ತಂದೆಯ ಸಮಾನ ಪ್ರತ್ಯಕ್ಷ ಪ್ರಮಾಣ ರಾಗಿ ಬಿಟ್ಟರೆ ತಿಳಿದುಕೊಳ್ಳುವುದು ಹಾಗೂ ನಂಬುವುದರಲ್ಲಿ ಪರಿಶ್ರಮ ಎನಿಸುವುದಿಲ್ಲ. ನಂತರ ತಮ್ಮ ಪ್ರಜೆ ಬಹಳ ಬೇಗ ಬೇಗ ತಯಾರಾಗಿ ಬಿಡುವುದು. ಪರಿಶ್ರಮ, ಸಮಯ ಕಡಿಮೆ ಹಾಗೂ ಪ್ರತ್ಯಕ್ಷ ಪ್ರಮಾಣ ಅನುಭವ ಮಾಡುವುದರಿಂದ ಪ್ರಜೆಯ ಸ್ಟಾಂಪ್(ಮುದ್ರಣ) ಬೀಳುತ್ತಾ ಹೋಗುವುದು. ನೀವು ರಾಜಾರಾಣಿ ಆಗುವವರಾಗಿದ್ದೀರಿ ಅಲ್ಲವೇ!

ಬಾಪ್ದಾದಾರವರು ಒಂದು ಮಾತಿನ ಮೇಲೆ ಮತ್ತೆ ಗಮನವನ್ನು ತರಿಸುತ್ತಿದ್ದಾರೆ- ವರ್ತಮಾನ ವಾಯುಮಂಡಲದ ಅನುಸಾರ ಮನಸ್ಸಿನಲ್ಲಿ, ಹೃದಯದಲ್ಲಿ ಈಗ ವೈರಾಗ್ಯವೃತ್ತಿಯನ್ನು ಇಮರ್ಜ್ ಮಾಡಿಕೊಳ್ಳಿ. ಬಾಪ್ದಾದಾರವರು ಪ್ರತಿಯೊಂದು ಮಗುವಿಗೂ ಭಲೇ ಪ್ರವೃತ್ತಿಯಲ್ಲಿರಲಿ, ಸೇವಾ ಕೇಂದ್ರದಲ್ಲಿರಲಿ, ಎಲ್ಲೇ ಇರಲಿ ಸ್ಥೂಲ ಸಾಧನ ಪ್ರತಿಯೊಬ್ಬರಿಗೂ ಕೊಡಲಾಗಿದೆ, ತಿನ್ನಲು, ಕುಡಿಯಲು ಹಾಗು ಉಳಿಯಲು ಸಾಧನ ಇಲ್ಲದಿರುವಂತಹ ಯಾವುದೇ ಮಕ್ಕಳಿಲ್ಲ. ಬೇಹದ್ದಿನ ವೈರಾಗ್ಯವೃತ್ತಿಯಲ್ಲಿ ಇರುತ್ತಾ ಬೇಕಾಗುವ ಅವಶ್ಯಕತೆ ಸಾಧನಗಳು ಎಲ್ಲರ ಬಳಿ ಇದೆ. ಒಂದು ವೇಳೆ ಯಾರಿಗಾದರೂ ಇವುಗಳ ಕೊರತೆ ಇದ್ದರೆ ಅವರ ಹುಡುಗಾಟಕೆ ಅಥವಾ ಆಲಸ್ಯದ ಕಾರಣವಾಗಿದೆ. ಬಾಕಿ ಡ್ರಾಮಾ ಅನುಸಾರ ಬಾಪ್ದಾದಾರವರು ತಿಳಿದುಕೊಂಡಿದ್ದಾರೆ- ಅವಶ್ಯಕ ಸಾಧನ ಎಲ್ಲರ ಬಳಿ ಇದೆ. ಏನೆಲ್ಲಾ ಅವಶ್ಯಕ ಸಾಧನಗಳಿವೆ ಅದಂತು ನಡೆಯಲೇ ಬೇಕಾಗಿದೆ. ಆದರೆ ಕೆಲವೊಂದು ಕಡೆ ಅವಶ್ಯಕತೆಗಿಂತ ಹೆಚ್ಚು ಸಾಧನವಿದೆ, ಸಾಧನೆ (ತಪಸ್ಸು) ಕಡಿಮೆ ಇದೆ ಹಾಗೂ ಸಾಧನದ ಪ್ರಯೋಗ ಮಾಡುವುದು ಅಥವಾ ಮಾಡಿಸುವುದು ಜಾಸ್ತಿ ಇದೆ ಆದ್ದರಿಂದ ಬಾಪ್ದಾದಾರವರು ಇಂದು ತಂದೆಯ ಸಮಾನರಾಗುವ ದಿವಸದಂದು ವಿಶೇಷ ಅಂಡರ್ ಲೈನ್ ಮಾಡಿಸುತ್ತಿದ್ದಾರೆ- ಸಾಧನಗಳ ಪ್ರಯೋಗದ ಅನುಭವ ಬಹಳಷ್ಟು ಮಾಡಿದ್ದೀರಿ, ಏನೆಲ್ಲಾ ಮಾಡಿದ್ದೀರೋ ಅದೆಲ್ಲಾ ಚೆನ್ನಾಗಿ ಮಾಡಿದ್ದೀರಿ, ಈಗ ಸಾಧನೆಯನ್ನು ಹೆಚ್ಚಿಸುವುದು ಅರ್ಥಾತ್, ಬೇಹದ್ದಿನ ವೈರಾಗ್ಯವೃತ್ತಿಯನ್ನು ತಂದುಕೊಳ್ಳಿ. ಬ್ರಹ್ಮಾ ತಂದೆಯನ್ನು ನೋಡಿದಿರಿ, ಅಂತಿಮ ಘಳಿಗೆಯವರೆಗೂ ಮಕ್ಕಳಿಗೆ ಸಾಧನ ಬಹಳಷ್ಟು ಕೊಟ್ಟರು ಆದರೆ ಸ್ವಯಂ ಸಾಧನಗಳ ಪ್ರಯೋಗದಿಂದ ದೂರವಿದ್ದರು. ಇದ್ದರೂ ಸಹ ದೂರವಿರುವುದು- ಇದಕ್ಕೆ ಹೇಳಲಾಗುತ್ತದೆ ವೈರಾಗ್ಯ. ಆದರೆ ನಮ್ಮ ಬಳಿ ಏನೂ ಇಲ್ಲ ಮತ್ತು ನಮಗಂತೂ ವೈರಾಗ್ಯವಿದೆ, ನಾವಂತೂ ವೈರಾಗೀ ಆಗಿದ್ದೇವೆ, ಇದು ಹೇಗೆ ಆಗಲು ಸಾಧ್ಯ? ಈ ಮಾತಂತೂ ಬೇರೆಯಾಗಿದೆ. ಎಲ್ಲವೂ ಇದ್ದರೂ ಸಹ ಜ್ಞಾನ ಹಾಗೂ ವಿಶ್ವ ಕಲ್ಯಾಣಕಾರಿ ಭಾವನೆಯಿಂದ, ತಂದೆಯನ್ನು, ಸ್ವಯಂ ಅನ್ನು ಪ್ರತ್ಯಕ್ಷ ಮಾಡುವ ಭಾವನೆಯಿಂದ ಈಗ ಸಾಧನಗಳ ಬದಲಾಗಿ ಬೇಹದ್ದಿನ ವೈರಾಗ್ಯವೃತ್ತಿ ಇರಲಿ. ಹೇಗೆ ಸ್ಥಾಪನೆಯ ಆದಿಯಲ್ಲಿ ಸಾಧನಗಳು ಕಡಿಮೆ ಇರಲಿಲ್ಲ ಆದರೆ ವೈರಾಗ್ಯವೃತ್ತಿಯ ಭಟ್ಟಿಯಲ್ಲಿ ಬಿದ್ದಿದ್ದವು. ಈ 14 ವರ್ಷ ಯಾವ ತಪಸ್ಸನ್ನು ಮಾಡಿದರು,

ಅಲ್ಲಿ ಬೇಹದ್ದಿನ ವೈರಾಗ್ಯವೃತ್ತಿಯ ವಾಯುಮಂಡಲ ಇತ್ತು. ಬಾಪ್ದಾದಾರವರು ಈಗ ಬಹಳಷ್ಟು ಸಾಧನಗಳನ್ನು ಕೊಟ್ಟಿದ್ದಾರೆ, ಈಗ ಸಾಧನಗಳ ಯಾವುದೇ ಕೊರತೆ ಇಲ್ಲ ಆದರೆ ಎಲ್ಲಾ ಇದ್ದರೂ ಸಹ ಬೇಹದ್ದಿನ ವೈರಾಗ್ಯವಿರಲಿ. ವಿಶ್ವದ ಆತ್ಮರ ಕಲ್ಯಾಣದ ಪ್ರತಿಯೂ ಸಹ ಈ ಸಮಯ ಈ ವಿಧಿಯ ಅವಶ್ಯಕತೆ ಇದೆ ಏಕೆಂದರೆ ನಾಲ್ಕಾರು ಕಡೆ ಇಚ್ಛೆಗಳು ವೃದ್ಧಿಯಾಗುತ್ತಿದೆ, ಇಚ್ಛೆಗಳ ವಶ ಆತ್ಮಗಳು ತೊಂದರೆಯಲ್ಲಿದೆ, ಭಲೆ ಪದಮಪತಿ ಆಗಿದ್ದಾರೆ ಆದರೆ ಅವರು ಸಹ ಇಚ್ಛೆಗಳಿಂದ ತೊಂದರೆಯಲ್ಲಿದ್ದಾರೆ. ವಾಯುಮಂಡಲದಲ್ಲಿ ಆತ್ಮಗಳ ತೊಂದರೆಯ ವಿಶೇಷ ಕಾರಣ ಈ ಹದ್ದಿನ ಇಚ್ಛೆಗಳಾಗಿವೆ. ಈಗ ತಾವು ತಮ್ಮ ಬೇಹದ್ದಿನ ವೈರಾಗ್ಯದ ವೃತ್ತಿಯ ಮೂಲಕ ಆ ಆತ್ಮಗಳಲ್ಲಿಯೂ ಸಹ ವೈರಾಗ್ಯವೃತ್ತಿಯನ್ನು ಹರಡಿಸಿ. ನಿಮ್ಮ ವೈರಾಗ್ಯವೃತ್ತಿಯ ವಾಯುಮಂಡಲದ ಹೊರತು ಆತ್ಮಗಳು ಸುಖಿ, ಶಾಂತ ಆಗಲು ಸಾಧ್ಯವಿಲ್ಲ. ತೊಂದರೆಯಿಂದ ಬಿಡುಗಡೆಯಾಗಲು ಸಾಧ್ಯವಿಲ್ಲ. ನೀವು ವೃಕ್ಷದ ಕಾಂಡವಾಗಿದ್ದೀರಿ, ಬ್ರಾಹ್ಮಣರ ಸ್ಥಾನ ವೃಕ್ಷದಲ್ಲಿ ಎಲ್ಲಿ ತೋರಿಸಲಾಗುತ್ತದೆ? ಬೇರಿನಲ್ಲಿ ತೋರಿಸಲಾಗುತ್ತದೆ ಅಲ್ಲವೇ! ಎಂದ ಮೇಲೆ ನೀವು ಫೌಂಡೇಶನ್(ಅಡಿಪಾಯ) ಆಗಿದ್ದೀರಿ ನಿಮ್ಮ ಅಲೆ ವಿಶ್ವದಲ್ಲಿ ಹರಡುತ್ತದೆ ಆದ್ದರಿಂದ ಬಾಪ್ದಾದಾರವರು ವಿಶೇಷ ಸಾಕಾರದಲ್ಲಿ ಬ್ರಹ್ಮಾ ತಂದೆಯ ಸಮಾನ ಆಗುವ ವಿಧಿ, ವೈರಾಗ್ಯವೃತ್ತಿಯ ಕಡೆಗೆ ವಿಶೇಷ ಗಮನವನ್ನು ತರಿಸುತ್ತಿದ್ದಾರೆ. ಪ್ರತಿಯೊಬ್ಬರಿಂದ ಅನುಭವವಾಗಲಿ ಇವರು ಸಾಧನಗಳ ವಶರಾಗಿಲ್ಲ, ಸಾಧನೆಯಲ್ಲಿ ಇರುವಂತಹವರು ಎಂದು. ಎಲ್ಲವೂ ಇದ್ದರೂ ವೈರಾಗ್ಯವೃತ್ತಿ ಇರಲಿ. ಅವಶ್ಯಕ ಸಾಧನಗಳನ್ನು ಬಳಸಿ ಆದರೆ ಎಷ್ಟು ಸಾಧ್ಯವೋ ಅಷ್ಟು ಹೃದಯದ ವೈರಾಗ್ಯವೃತ್ತಿಯಿಂದ, ಸಾಧನೆಗಳ ವಶೀಬೂತರಾಗಿ ಅಲ್ಲ. ಈಗ ಸಾಧನೆಯ ವಾಯುಮಂಡಲವನ್ನು ನಾಲ್ಕಾರು ಕಡೆ ತಯಾರು ಮಾಡಿ. ಸಮಯದ ಸಮೀಪತೆಯ ಪ್ರಮಾಣ ಈಗ ಬೇಹದ್ದಿನ ವೈರಾಗ್ಯವೇ ಸತ್ಯ ತಪಸ್ಸು ಹಾಗೂ ಸಾಧನೆಯಾಗಿದೆ. ಸೇವೆಯ ವಿಸ್ತಾರ ಈ ವರ್ಷದಲ್ಲಿ ಬಹಳ ಮಾಡಿದ್ದೀರಿ. ಈ ವರ್ಷ ನಾಲ್ಕಾರು ಕಡೆ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಮಾಡಿದ್ದೀರಿ ಹಾಗೂ ಸೇವೆಯಿಂದ ಸಹಯೋಗಿ ಆತ್ಮಗಳು ಸಹ ಬಹಳಷ್ಟು ಆಗಿದ್ದಾರೆ, ಸಮೀಪ ಬಂದಿದ್ದಾರೆ, ಸಂಪರ್ಕದಲ್ಲಿ ಬಂದಿದ್ದಾರೆ, ಆದರೆ ಕೇವಲ ಸಹಯೋಗಿಯನ್ನಾಗಿ ಮಾಡಬೇಕಾ? ಕೇವಲ ಇಲ್ಲಿಯವರೆಗೆ ಇಡಬೇಕಾ? ಒಳ್ಳೊಳ್ಳೆಯ ಸಹಯೋಗಿ ಆತ್ಮಗಳಿದ್ದಾರೆ, ಈಗ ಆ ಸಹಯೋಗಿ ಕ್ವಾಲಿಟಿ( ಗುಣಮಟ್ಟದ) ಆತ್ಮರನ್ನು ಇನ್ನಷ್ಟು ಸಂಬಂಧದಲ್ಲಿ ತೆಗೆದುಕೊಂಡು ಬನ್ನಿ. ಅನುಭವ ಮಾಡಿಸಿ, ಯಾವುದರಿಂದ ಸಹಯೋಗಿಯಿಂದ ಸಹಜಯೋಗಿ ಆಗಿ ಬಿಡಲಿ. ಇದಕ್ಕಾಗಿ ಒಂದು ಸಾಧನೆಯ ವಾಯುಮಂಡಲ ಹಾಗೂ ಎರಡನೆಯದು ಬೇಹದ್ದಿನ ವೈರಾಗ್ಯವೃತ್ತಿಯ ವಾಯುಮಂಡಲ ಇರಲಿ ಆಗ ಇದರಿಂದ ಸಹಜ ಸಹಯೋಗಿ, ಸಹಜಯೋಗಿ ಆಗಿ ಬಿಡುವರು. ಅವರ ಸೇವೆ ಭಲೆ ಮಾಡುತ್ತಿರಿ ಆದರೆ ಜೊತೆಯಲ್ಲಿ ಸಾಧನೆ, ತಪಸ್ಸಿನ ವಾಯುಮಂಡಲ ಅವಶ್ಯಕ ಆಗಿದೆ .

ಈಗ ನಾಲ್ಕಾರು ಕಡೆ ಶಕ್ತಿಶಾಲಿ ತಪಸ್ಸು ಮಾಡಬೇಕು , ಈ ತಪಸ್ಸು ಮನಸಾ ಸೇವೆಗೆ ನಿಮಿತ್ತ ಆಗಬೇಕು, ಇಂತಹ ಶಕ್ತಿಶಾಲಿ ಸೇವೆ ಈಗ ತಪಸ್ಸಿನಿಂದ ಮಾಡಬೇಕು. ಈಗ ಮಾನಸಾ ಸೇವೆ ಅರ್ಥಾತ್ ಸಂಕಲ್ಪದ ಮೂಲಕ ಸೇವೆಯ ಟಚಿಂಗ್ ಆಗಲಿ, ಇದರ ಅವಶ್ಯಕತೆ ಇದೆ. ಸಮಯ ಸಮೀಪ ಬರುತ್ತಿದೆ, ನಿರಂತರ ಸ್ಥಿತಿಯ ಹಾಗೂ ನಿರಂತರ ಶಕ್ತಿಶಾಲಿ ವಾಯುಮಂಡಲದ ಅವಶ್ಯಕತೆ ಇದೆ. ತಂದೆಯ ಸಮಾನ ಆಗಬೇಕೆಂದರೆ ಮೊದಲು ಬೇಹದ್ದಿನ ವೈರಾಗ್ಯವೃತ್ತಿಯನ್ನು ಧಾರಣೆ ಮಾಡಿ. ಅಂತ್ಯದವರೆಗೂ ಬ್ರಹ್ಮಾ ತಂದೆಯಲ್ಲಿ ಇದೆ ವಿಶೇಷತೆಯನ್ನು ನೋಡಿದಿರಿ. ವೈಭವದಲ್ಲಿಯೂ ಮೋಹ ಇರಲಿಲ್ಲ, ಮಕ್ಕಳಲ್ಲಿಯೂ ಇರಲಿಲ್ಲ.... ಎಲ್ಲರೊಂದಿಗೆ ವೈರಾಗ್ಯವೃತ್ತಿ. ಹಾಗಾದರೆ ಇಂದಿನ ದಿನದ ತಂದೆಯ ಸಮಾನರಾಗುವ ಪಾಠವನ್ನು ಪಕ್ಕಾ ಮಾಡಿಕೊಳ್ಳಿ. ಬ್ರಹ್ಮಾ ತಂದೆಯ ಸಮಾನ ಆಗಲೇಬೇಕು. ಇಂತಹ ದೃಢ ನಿಶ್ಚಯ ಅವಶ್ಯವಾಗಿ ಮುಂದುವರಿಸುವುದು.

ಒಳ್ಳೆಯದು. ಇಂದು ಯಾವ ಮಾತನ್ನು ಅಂಡರ್ಲೈನ್ ಮಾಡಿದ್ದೀರಿ? ಬೇಹದ್ದಿನ ವೈರಾಗ್ಯ. ಈಗ ಆತ್ಮಗಳನ್ನು ಇಚ್ಛೆಗಳಿಂದ ಬಚಾವ್ ಮಾಡಿ. ಪಾಪ ಬಹಳ ದುಃಖಿಯಾಗಿದ್ದಾರೆ. ಬಹಳ ತೊಂದರೆಯಲ್ಲಿದ್ದಾರೆ. ಹಾಗಾದರೆ ಈಗ ದಯಾ ಹೃದಯಗಳಾಗಿ. ದಯೆಯ ಅಲೆಯನ್ನು ಬೇಹದ್ದಿನ ವೈರಾಗ್ಯ ವೃತ್ತಿಯ ಮೂಲಕ ಹರಡಿಸಿ. ಈಗ ಎಲ್ಲಾ ಶ್ರೇಷ್ಠಾತಿ ಶ್ರೇಷ್ಠ ಪರಮಧಾಮದಲ್ಲಿ ತಂದೆಯ ಜೊತೆ ಕುಳಿತು ಸರ್ವ ಆತ್ಮರಿಗೆ ದಯೆಯ ದೃಷ್ಟಿಯನ್ನು ಕೊಡಿ. ಪ್ರಕಂಪನಗಳನ್ನು ಹರಡಿಸಿ. ಹರಡಿಸಬಲ್ಲಿರಿ ಅಲ್ಲವೇ? ಹಾಗಾದರೆ ಈಗ ಪರಮಧಾಮದಲ್ಲಿ ತಂದೆಯ ಜೊತೆ ಕುಳಿತು ಬಿಡಿ. ಅಲ್ಲಿಂದ ಈ ಬೇಹದ್ದಿನ ವಾಯುಮಂಡಲವನ್ನು ಹರಡಿಸಿ. (ಬಾಪ್ದಾದಾರವರು ಡ್ರಿಲ್ ಮಾಡಿಸಿದರು) ಒಳ್ಳೆಯದು.

ನಾಲ್ಕಾರು ಕಡೆಯ ಸರ್ವ ಅತಿ ಸ್ನೇಹಿ ಮಕ್ಕಳಿಗೆ, ಸರ್ವ ನಾಲ್ಕಾರು ಕಡೆಯ ಸಾಧನೆ ಮಾಡುವಂತಹ ಶ್ರೇಷ್ಠ ಆತ್ಮರಿಗೆ, ಬಾಪ್ದಾದಾರವರಿಗೆ ಇಡೀ ದಿನದಲ್ಲಿ ಬಹಳ ಪ್ರೀತಿಯ, ಮಧುರ ಮಧುರ ಗೀತೆಯನ್ನು ಹೇಳುವಂತಹ, ಆತ್ಮಿಕ ವಾರ್ತಾಲಾಪ ಮಾಡುವಂತಹ ಶಕ್ತಿಯರಿಗೆ, ಗುಣಗಳ ವರದಾನದಿಂದ ಜೋಳಿಗೆಯನ್ನು ತುಂಬಿಸಿಕೊಳ್ಳುವಂತಹ, ಬಾಪ್ದಾದಾರವರಿಗೆ ಎಲ್ಲರ ಗೀತೆ, ಖುಷಿಯ ಗೀತೆ, ಸ್ನೇಹದ ಗೀತೆ, ಆತ್ಮೀಯ ನಶೆಯ ಗೀತೆ, ಮಧುರ ಮಧುರ ಮಾತುಗಳು ಬಹಳ ಬಹಳ ಹೃದಯವನ್ನು ಆನಂದ ಪಡಿಸುವಂತಹ ಗೀತೆಗಳು ಕೇಳಿಸುತ್ತಿದ್ದವು ಹಾಗೂ ಬಾಪ್ದಾದಾರವರು ಸಹ ಕೇಳಿಸಿಕೊಳ್ಳುವುದರಲ್ಲಿ ಹಾಗೂ ಮಿಲನ ಮಾಡುವುದರಲ್ಲಿ ಲವಲೀನರಾಗಿದ್ದರು. ಹಾಗಾದರೆ ಇಂತಹ ಸತ್ಯ ಹೃದಯದ, ಹೃದಯದ ಮಾತನ್ನು ಹೇಳುವಂತಹ ಮಕ್ಕಳು ಮಹಾನ್ ಆಗಿದ್ದಾರೆ ಹಾಗೂ ಸದಾ ಮಹಾನ್ ಆಗಿ ಇರುತ್ತಾರೆ, ಇಂತಹ ಮಧುರ ಮಧುರ ಮಕ್ಕಳು ಸದಾ ಬೇಹದ್ದಿನ

ವೈರಾಗ್ಯವೃತ್ತಿಯನ್ನು ತೊಡಗಿಸಿಕೊಳ್ಳುವಂತಹ, ದೃಢ ನಿಶ್ಚಯ ಬುದ್ಧಿ ಮಕ್ಕಳಿಗೆ ಬಾಪ್ದಾದಾರವರು ಒಂದರ ಬದಲಾಗಿ ಪದಮದಷ್ಟು ರಿಟರ್ನ್ ಸ್ನೇಹವನ್ನು ಕೊಡುತ್ತಿದ್ದಾರೆ. ಹೃದಯ ರಾಮನ ಹೃದಯದಲ್ಲಿ ಇರುವಂತಹ ಎಲ್ಲಾ ಮಕ್ಕಳಿಗೂ ಬಹಳ ಬಹಳ ನೆನಪು ಪ್ರೀತಿ ಹಾಗೂ ನಮಸ್ತೆ.

ಯಾರೆಲ್ಲಾ ಹೊರಗೆ ಕುಳಿತು ಕೇಳುತ್ತಿದ್ದೀರಿ ಅವರನ್ನು ಸಹ ತಂದೆ ನೋಡುತ್ತಿದ್ದಾರೆ ಹಾಗೂ ಬಾಪ್ದಾದಾರವರು ದೂರದಲ್ಲಿ ನೋಡುವುದಿಲ್ಲ ಆದರೆ ಎಲ್ಲಾ ಕಡೆಯ ಮಕ್ಕಳನ್ನು ಸಮ್ಮುಖದಲ್ಲಿ ನೋಡಿ ನೆನಪು ಪ್ರೀತಿ ಹಾಗೂ ಶುಭಾಶಯಗಳು ಹಾಗೂ ನೆನಪಿನ ಉಡುಗೊರೆ ಹಾಗೂ ನೆನಪಿನ ಪತ್ರಗಳ ರಿಟರ್ನ್ ಕೊಡುತ್ತಿದ್ದಾರೆ- ಸದಾ ಹಾರುವ ಕಲೆಯಲ್ಲಿ ಹಾರುವಂಥಹ ಸತ್ಯ ಸದಾ ಸಂಪನ್ನರಾಗಿರಿ, ಸದಾ ಸಂಪನ್ನರಾಗಿ ಇರುವಿರಿ. ಒಳ್ಳೆಯದು.

ವರದಾನ: ವರದಾನ: ಶ್ರೇಷ್ಠ ಸಂಕಲ್ಪದ ಶಕ್ತಿಯ ಮೂಲಕ ಸಿದ್ಧಿಗಳನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ಸಿದ್ಧಿ ಸ್ವರೂಪ ಭವ.
ನೀವು ಮಾಸ್ಟರ್ ಸರ್ವ ಶಕ್ತಿವಾನ್ ಮಕ್ಕಳ ಸಂಕಲ್ಪದಲ್ಲಿ ಇಷ್ಟು ಶಕ್ತಿಯಿದೆ ಯಾವುದನ್ನು ಯಾವ ಸಮಯದಲ್ಲಿ ಬೇಕಾದರೂ ಅದನ್ನು ಮಾಡಬಹುದು ಮತ್ತು ಮಾಡಿಸಲೂಬಹುದು ಏಕೆಂದರೆ ನಿಮ್ಮ ಸಂಕಲ್ಪ ಸದಾ ಶುಭ, ಶ್ರೇಷ್ಠ ಮತ್ತು ಕಲ್ಯಾಣಕಾರಿಯಾಗಿರುವುದು. ಯಾವುದು ಶ್ರೇಷ್ಠ ಮತ್ತು ಕಲ್ಯಾಣಕಾರಿ ಸಂಕಲ್ಪ ಅದು ಖಂಡಿತ ಸಿದ್ಧಿಯಾಗುವುದು. ಮನಸ್ಸು ಸದಾ ಏಕಾಗ್ರ ಅರ್ಥಾತ್ ಒಂದೇ ಸ್ಥಾನದಲ್ಲಿ ಸ್ಥಿತವಾಗಿರುವುದು, ಅಲೆದಾಡುವುದಿಲ್ಲ. ಎಲ್ಲಿ ಬೇಕೊ ಅಲ್ಲಿ ಮನಸ್ಸನ್ನು ಸ್ಥಿತ ಮಾಡಬಲ್ಲಿರಿ. ಇದರಿಂದ ಸಿದ್ಧಿ ಸ್ವರೂಪ ಸ್ವತಃವಾಗಿ ಆಗಿ ಬಿಡುವಿರಿ.

ಸ್ಲೋಗನ್: ಸ್ಲೋಗನ್: ಪರಿಸ್ಥಿತಿಗಳ ಏರುಪೇರಿನ ಪ್ರಭಾವದಿಂದ ರಕ್ಷಿಸಿಕೊಳ್ಳಬೇಕಾದರೆ ವಿದೇಹಿ ಸ್ಥಿತಿಯಲ್ಲಿರುವ ಅಭ್ಯಾಸ ಮಾಡಿ.